ಉತ್ತರಿಸಬೇಕಾದ ಸಚಿವರು

## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ದಿನೇಶ್ ಗೂಳಿಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 514 |
| ಉತ್ತರಿಸಬೇಕಾದ ದಿನಾಂಕ | : | 11-03-2025 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಸಹಕಾರ ಕ್ಷೇತ್ರಕ್ಕೆ ಹಣಕಾಸು ನೆರವು ನೀಡುವ ಸಂಸ್ಥೆಗಳಾವುವು; | ರಾಜ್ಯದ ಸಹಕಾರ ಕ್ಷೇತ್ರದಲ್ಲಿ ಸಹಕಾರ ಸಂಘಗಳಿಗೆ ಹಣಕಾಸು ನೆರವು ನೀಡುವ ಪ್ರಮುಖ ಸಂಸ್ಥೆಗಳು ಈ ಕೆಳಗಿನಂತಿರುತ್ತವೆ.<br>1. ನಬಾರ್ಡ್ (National Bank for Agricultural and Rural Development)<br>2. ಎನ್‌ಸಿಡಿಸಿ (National Cooperative Development Corporation)<br>3. ಎನ್‌ಡಿಡಿಬಿ (National Dairy Development Board)<br><br>ಮೇಲಿನ ಸಂಸ್ಥೆಗಳಲ್ಲದೆ ವಿವಿಧ ವಾಣಿಜ್ಯ ಬ್ಯಾಂಕುಗಳು ಸಣ್ಣ ಪ್ರಮಾಣದಲ್ಲಿ ವಾಣಿಜ್ಯ ಬ್ಯಾಂಕಿಗೆ ಅಧ್ಯರ್ಪಿತಗೊಂಡ ಸುಮಾರು 30 ಸಹಕಾರ ಸಂಘಗಳಿಗೆ ಕೃಷಿ ಸಾಲ ವಿತರಿಸುತ್ತಿರುತ್ತವೆ. |

ಆ) 2020–21 ರಿಂದ 2024–25ನೇ ಸಾಲಿನವರೆಗೆ ಸಹಕಾರ ಕ್ಷೇತ್ರಕ್ಕೆ ನಬಾರ್ಡ್ (ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಅಂಡ್ ರೂರಲ್ ಡೆವಲಪ್‌ಮೆಂಟ್) ಸೇರಿದಂತೆ ಇನ್ನಿತರೆ ಸಂಸ್ಥೆಗಳಿಂದ ಎಷ್ಟೆಷ್ಟು ಹಣಕಾಸು ನೆರವು ಬಂದಿದೆ; (ವರ್ಷವಾರು ಹಾಗೂ ಸಂಸ್ಥೆಗಳವಾರು ಸಂಪೂರ್ಣ ವಿವರ ನೀಡುವುದು)

2020–21 ರಿಂದ 2024–25ನೇ ಸಾಲಿನವರೆಗೆ ಸಹಕಾರ ಕ್ಷೇತ್ರಕ್ಕೆ ಹಣಕಾಸು ಸಂಸ್ಥೆಗಳಿಂದ ನೀಡಿದ ಸಾಲದ ವಿವರ ಕೆಳಗಿನಂತಿದೆ.

(ರೂ.ಕೋಟಿಗಳಲ್ಲಿ)

| ವರ್ಷ | ನಬಾರ್ಡ್ | | | | | ಎನ್‌ಸಿಡಿಸಿ ಯಿಂದ | ಎನ್‌ಡಿಡಿಬಿ ಯಿಂದ |
|---|---|---|---|---|---|---|---|
| | ಅಪೆಕ್ಸ್ ಬ್ಯಾಂಕಿಗೆ ನೀಡಿರುವ ಸಾಲ | | | | ಕಸ್ಕಾರ್ಡ್ ಬ್ಯಾಂಕಿಗೆ ನೀಡಿರುವ ಸಾಲ | | |
| | ಅಲ್ಪಾವಧಿ ಕೃಷಿ ಸಾಲ | | | ಮಧ್ಯಮಾವಧಿ/ ದೀರ್ಘಾವಧಿ ಕೃಷಿ ಸಾಲ | | | |
| | ರಿಯಾಯಿತಿ ಬಡ್ಡಿ ದರ | | ಹೆಚ್ಚಿನ ಬಡ್ಡಿ ದರದಲ್ಲಿ | | | | |
| | ಸಾಮಾನ್ಯ ಸಂದರ್ಭ | ಕೋವಿಡ್ ಸಂದರ್ಭ | | | | | |
| 2020–21 | 5500.00 | 1700.00 | 3500.00 | 1429.40 | 315.61 | 170.11 | 83.29 |
| 2021–22 | 5483.90 | 1415.00 | 2000.00 | 1493.19 | 350.00 | 163.57 | 24.56 |
| 2022–23 | 5550.00 | – | 4500.00 | 2416.30 | 400.00 | 111.48 | 170.55 |
| 2023–24 | 5600.00 | – | 5200.00 | 2199.62 | 408.55 | 259.96 | 116.74 |
| 2024–25 (ಫೆಬ್ರವರಿ ಅಂತ್ಯಕ್ಕೆ) | 3236.11 | – | 8580.00 | 1128.65 | 547.80 | 433.73 | 85.39 |

| | | |
|---|---|---|
| ಇ | 2020–21 ರಿಂದ 2024–25ನೇ ಸಾಲಿನ ಹಣಕಾಸು ವರ್ಷಗಳಲ್ಲಿ ಸದರಿ ಸಂಸ್ಥೆಗಳಿಂದ ಪೂರ್ವ ನಿರ್ಧಾರಿತದಂತೆ ಪೂರ್ಣ ಹಣಕಾಸು ನೆರವು ಬಂದಿದೆಯೇ; ಇಲ್ಲದಿದ್ದಲ್ಲಿ, ಯಾವ ಯಾವ ಸಂಸ್ಥೆಗಳಿಂದ ಎಷ್ಟೆಷ್ಟು ಹಣಕಾಸು ನೆರವು ಬರಬೇಕಾಗಿತ್ತು; (ಸಂಪೂರ್ಣ ವಿವರ ನೀಡುವುದು) | 2020–21 ರಿಂದ 2024–25 ನೇ ಸಾಲಿನ ಹಣಕಾಸು ವರ್ಷಗಳಲ್ಲಿ ನಬಾರ್ಡ್ ಸಂಸ್ಥೆಯಿಂದ ತನ್ನ ರಿಯಾಯಿತಿ ಬಡ್ಡಿ ದರದ ಅಲ್ಪಾವಧಿ ಕೃಷಿ ಸಾಲ ನೀತಿಗೆ ಹೋಲಿಸಿದ್ದಲ್ಲಿ ಪೂರ್ಣ ಹಣಕಾಸು ನೆರವು ನೀಡಿರುವುದಿಲ್ಲ.<br><br>ನಬಾರ್ಡ್ ಸಂಸ್ಥೆ 2024–25 ನೇ ಸಾಲಿನ SAO(Seasonal Agricultural Operation) ಸಾಲ ನೀತಿಯಲ್ಲಿ ಕೇಂದ್ರ ಸರ್ಕಾರ STCRC ಅಡಿಯಲ್ಲಿ ನೀಡುವ ಹಂಚಿಕೆಗೆ ಒಳಪಟ್ಟು ಡಿಸಿಸಿ ಬ್ಯಾಂಕುಗಳ RLP (Realistic Lending Programme) ಯ ಶೇ.40 ರಷ್ಟು ಪುನರ್ಧನ ನೀಡಲು ತಿಳಿಸಲಾಗಿತ್ತು.<br><br>ಕಳೆದ 5 ವರ್ಷಗಳಲ್ಲಿ ನಬಾರ್ಡ್ ಸಾಲದ ನೀತಿಗೆ ಅನುಗುಣವಾಗಿ ಕಡಿಮೆಯಾಗಿರುವ ಪುನರ್ಧನದ ಪ್ರಮಾಣ ಈ ಕೆಳಗಿನಂತಿರುತ್ತದೆ.<br>(ರೂಕೋಟಿಗಳಲ್ಲಿ) |

| ವರ್ಷ | RLP ಪ್ರಕಾರ ಅಪೆಕ್ಸ್ ಬ್ಯಾಂಕ್ ಸಲ್ಲಿಸಿದ ಬೇಡಿಕೆ | ಶೇ.40 ರಷ್ಟು ಪ್ರಮಾಣದ ಅರ್ಹ ಪುನರ್ಧನದ ಮೊತ್ತ | ಮಂಜೂರಾದ ಸಾಲದ ಮಿತಿ | ಕೊರತೆ |
|---|---|---|---|---|
| 2020–21 | 15,100.00 | 6040.00 | 5500.00 | 540.00 |
| 2021–22 | 18,000.00 | 7200.00 | 5483.90 | 1716.10 |
| 2022–23 | 23,195.98 | 9278.39 | 5550.00 | 3728.39 |
| 2023–24 | 22,927.44 | 9170.98 | 5600.00 | 3570.98 |
| 2024–25 | 22,902.00 | 9160.80 | 3236.11 | 5924.69 |

| | | |
|---|---|---|
| | | ಅಪೆಕ್ಸ್ ಬ್ಯಾಂಕ್ 2024–25 ನೇ ಸಾಲಿಗೆ ಪುನರ್ಧನ ಪಡೆಯಲು ಅರ್ಹತೆ ಹೊಂದಿಲ್ಲದೇ ಇರುವ ಬೀದರ್ ಡಿಸಿಸಿ ಬ್ಯಾಂಕ್ ಹೊರತುಪಡಿಸಿ ಉಳಿದ ಡಿಸಿಸಿ ಬ್ಯಾಂಕುಗಳ RLP (Realistic Lending programme) ಪ್ರಕಾರ ರೂ.22,902 ಕೋಟಿ ಅಲ್ಪಾವಧಿ ಕೃಷಿ ಸಾಲ ಪಡೆಯಲು ನಬಾರ್ಡ್ ಸಂಸ್ಥೆಗೆ ಪುನರ್ಧನಕ್ಕಾಗಿ ಅರ್ಜಿ ಸಲ್ಲಿಸಿದ್ದು, ಇದಕ್ಕೆ ಎದುರಾಗಿ ನಬಾರ್ಡ್ ರೂ.3236.11 ಕೋಟಿಗಳ ಪುನರ್ಧನದ ಮಿತಿಯನ್ನು ಮಾತ್ರ ರಿಯಾಯಿತಿ ಬಡ್ಡಿ ದರದಲ್ಲಿ (ಶೇ.4.50%) ಮಂಜೂರು ಮಾಡಿರುತ್ತದೆ.<br><br>ಕಳೆದ ವರ್ಷದಲ್ಲಿ ಈ ಮಿತಿ 5600 ಕೋಟಿಗಳಿದ್ದು, ಇದಕ್ಕೆ ಹೋಲಿಸಿದಲ್ಲಿ ರೂ.2363.89 ಕೋಟಿಗಳು ಕಡಿಮೆಯಾಗಿರುತ್ತದೆ.<br><br>ಎನ್‌ಸಿಡಿಸಿ ಮತ್ತು ಎನ್‌ಡಿಡಿಬಿ ಸಂಸ್ಥೆಗಳ ಬಡ್ಡಿ ದರಗಳು ಹೆಚ್ಚಾಗಿದ್ದು, ಕಡಿಮೆ ಸಂಖ್ಯೆಯ ಸಹಕಾರ ಸಂಘಗಳು ಸಾಲಕ್ಕೆ ಅರ್ಜಿ ಸಲ್ಲಿಸಿದ್ದು, ಸಹಕಾರ ಸಂಘಗಳು ಸಲ್ಲಿಸಿದ ಅರ್ಜಿಗಳಿಗೆ ಪೂರ್ಣ ಪ್ರಮಾಣದಲ್ಲಿ ಸಾಲ ವಿತರಿಸಲಾಗಿದೆ. |
| ಈ) | ಸದರಿ ವರ್ಷಗಳಲ್ಲಿ ಬಾಕಿಯಿರುವ ಅವಶ್ಯ ಹಣಕಾಸಿನ ಕೊರತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | 2020–21 ರಿಂದ 2023–24 ನೇ ಸಾಲಿನವರೆಗೆ ನಬಾರ್ಡ್ ರಿಯಾಯಿತಿ ಬಡ್ಡಿ ದರದ ಪುನರ್ಧನದ ಸಾಲದ ಮಿತಿಯನ್ನು ಪೂರ್ವ ನಿರ್ಧಾರದಂತೆ ಕಡಿಮೆ ಮಾಡಿದ್ದರೂ ಸಹ ನಬಾರ್ಡ್ ನಿಶ್ಚಿತ (ಹೆಚ್ಚಿನ) ಬಡ್ಡಿ ದರದ SAO(Seasonal Agricultural Operation) ಸಾಲ ನೀತಿಯಲ್ಲಿ ಡಿಸಿಸಿ ಬ್ಯಾಂಕುಗಳ RLP ( Realistic Lending programme) ಯ ಶೇ.60 ರಷ್ಟು ಪುನರ್ಧನ ಪಡೆಯಲು ಅವಕಾಶ ಇದ್ದು, ಈ ಮಿತಿಯನ್ನು ಡಿಸಿಸಿ ಬ್ಯಾಂಕುಗಳು ಉಪಯೋಗಿಸಿಕೊಳ್ಳುತ್ತಿರುತ್ತವೆ. |

| | | |
|---|---|---|
| | | ರಾಜ್ಯ ಸರ್ಕಾರದಿಂದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳು ಅರ್ಹರಿರುವಂತೆ ರಿಯಾಯಿತಿ ಬಡ್ಡಿದರದ ಅಲ್ಪವಧಿ ಕೃಷಿ ಸಾಲದ ಮಿತಿಯನ್ನು ಮಂಜೂರು ಮಾಡಲು ನಬಾರ್ಡ್‌ನ್ನು ಕೋರಲಾಗಿದೆ.<br><br>ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳು ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಹೆಚ್ಚಿನ ತೇವಣಿ ಸಂಗ್ರಹಿಸಲು ಕಾರ್ಯಕ್ರಮ ರೂಪಿಸಲು ಸೂಚಿಸಲಾಗಿದೆ. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ಕಾರ್ಯವ್ಯಾಪ್ತಿಯಲ್ಲಿರುವ ಎಲ್ಲಾ ಸಹಕಾರ ಸಂಘಗಳ ಕಾಯ್ದಿಟ್ಟ ನಿದಿಗಳನ್ನು ಹಾಗೂ ಇನ್ನಿತರೆ ನಿಧಿಗಳನ್ನು ಖಡ್ಡಾಯವಾಗಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳಲ್ಲಿ ತೊಡಗಿಸಲು ಕ್ರಮ ಜರುಗಿಸಲು ಸಹಕಾರ ಇಲಾಖಾಧಿಕಾರಿಗಳಿಗೆ ಸೂಚಿಸಲಾಗಿದೆ. |

**ಸಂಖ್ಯೆ: ಸಿಒ 52 ಸಿಎಲ್‌ಎಸ್ 2025**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**